Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

# ಶಿವರಾಮ ಕಾರಂತರ ಚಿತ್ರಕಲಾ ಚಿಂತನೆ: ಕಲಾದೃಷ್ಟಿ, ಸೌಂದರ್ಯಪ್ರಜ್ಞೆ ಮತ್ತು ಸಾಂಸ್ಕೃತಿಕ ವಿಮರ್ಶೆ

ಡಾ. ಕೃಷ್ಣಪ್ಪ ಕೆ.ಎನ್.

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ – 562101

**ಸಾರಲೇಖ (Abstract):**

ಕನ್ನಡ ಸಾಹಿತ್ಯದ ಬಹುಮುಖ ಪ್ರತಿಭೆಗಳಲ್ಲಿ ಶಿವರಾಮ ಕಾರಂತರ ಸ್ಥಾನ ವಿಶಿಷ್ಟವಾದುದು. ಸಾಹಿತ್ಯ, ಯಕ್ಷಗಾನ, ಪರಿಸರ, ಶಿಕ್ಷಣ, ವಿಜ್ಞಾನ, ಸಮಾಜಚಿಂತನೆ, ಪ್ರವಾಸ ಮತ್ತು ಸಂಸ್ಕೃತಿಯ ವಿವಿಧ ಕ್ಷೇತ್ರಗಳಲ್ಲಿ ಅವರು ತಮ್ಮ ಸೃಜನಶೀಲತೆಯನ್ನು ವಿಸ್ತರಿಸಿದಂತೆ ಚಿತ್ರಕಲೆ ಮತ್ತು ದೃಶ್ಯಕಲೆಗಳ ಕ್ಷೇತ್ರದಲ್ಲಿಯೂ ಮಹತ್ವದ ಚಿಂತನೆಗಳನ್ನು ದಾಖಲಿಸಿದ್ದಾರೆ. ಕಾರಂತರ ಚಿತ್ರಕಲಾ ಚಿಂತನೆ ಕೇವಲ ಕಲಾಕೃತಿಗಳ ಪರಿಚಯ ಅಥವಾ ಕಲಾವಿದರ ಜೀವನಚರಿತ್ರೆಗೆ ಸೀಮಿತವಾಗಿಲ್ಲ. ಕಲಾಕೃತಿಯನ್ನು ನೋಡುವ ವಿಧಾನ, ಕಲಾವಿದನ ಸೃಜನಶೀಲ ಮನಸ್ಸು, ರೇಖೆ, ಬಣ್ಣ, ಆಕಾರ, ಸಂಯೋಜನೆ, ಸೌಂದರ್ಯಾನುಭವ, ಕಲಾಸಂಸ್ಕಾರ, ಕಲಾಶಿಕ್ಷಣ, ಪಾಶ್ಚಿಮಾತ್ಯ ಮತ್ತು ಭಾರತೀಯ ಕಲಾಪರಂಪರೆಗಳ ನಡುವಿನ ವ್ಯತ್ಯಾಸ, ಆಧುನಿಕ ಕಲೆಯ ಸ್ವರೂಪ ಹಾಗೂ ಕಲಾಸಂಸ್ಥೆಗಳ ಕಾರ್ಯವೈಖರಿ ಮೊದಲಾದ ಹಲವು ಆಯಾಮಗಳನ್ನು ಅವರ ಬರಹಗಳು ಒಳಗೊಂಡಿವೆ.

ಕಾರಂತರ ಚಿತ್ರಕಲಾ ಚಿಂತನೆಯ ಮೂಲದಲ್ಲಿ 'ಕಲೆಯನ್ನು ನೋಡುವ ಕಣ್ಣು' ಮತ್ತು 'ಕಲೆಯನ್ನು ಅನುಭವಿಸುವ ಮನಸ್ಸು'ಗಳನ್ನು ಬೆಳೆಸಬೇಕೆಂಬ ಆಶಯವಿದೆ. ಭಾರತೀಯ ಸಮಾಜದಲ್ಲಿ ಚಿತ್ರಕಲೆ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆಯದಿರುವುದು, ಜನರಲ್ಲಿ ಕಲೆಯನ್ನು ಆಸ್ವಾದಿಸುವ ಮನೋಭಾವದ ಕೊರತೆ, ಕಲಾಶಿಕ್ಷಣದ ಅಭಾವ, ಕಲಾಕೃತಿಗಳ ದಾಖಲೀಕರಣದ ಕೊರತೆ ಮತ್ತು ಕಲಾಸಂಸ್ಥೆಗಳ ಮಿತಿಗಳನ್ನು ಅವರು ತೀವ್ರವಾಗಿ ಗುರುತಿಸಿದ್ದಾರೆ. ಪಾಶ್ಚಿಮಾತ್ಯ ಕಲೆಯ ಪ್ರಯೋಗಶೀಲತೆಯನ್ನು ಮೆಚ್ಚಿಕೊಂಡರೂ ಅದನ್ನು ಅಂಧವಾಗಿ ಅನುಕರಿಸುವುದನ್ನು ಅವರು ಒಪ್ಪಲಿಲ್ಲ. ಅದೇ ರೀತಿ ಭಾರತೀಯ ಕಲೆಯ ಪರಂಪರೆಯನ್ನು ಗೌರವಿಸುತ್ತಿದ್ದರೂ ಅದರ ಮಿತಿಗಳನ್ನು ವಿಮರ್ಶಾತ್ಮಕವಾಗಿ ಗುರುತಿಸಿದರು.

ಈ ಸಂಶೋಧನಾ ಲೇಖನದ ಅಧ್ಯಯನಕ್ಕೆ ಕಾರಂತರ– ಕರ್ನಾಟಕದಲ್ಲಿ ಚಿತ್ರಕಲೆ, ಭಾರತೀಯ ಚಿತ್ರಕಲೆ, ಕಲೆಯ ದರ್ಶನ, ಕಲಾಪ್ರಪಂಚ, ಸ್ಮೃತಿಪಟಲದಿಂದ, ಅಪೂರ್ವ ಪಶ್ಚಿಮ, ಹುಚ್ಚುಮನಸ್ಸಿನ ಹತ್ತು ಮುಖಗಳು ಹಾಗೂ ಅವರ ಬಿಡಿ ಕಲಾ ಲೇಖನಗಳನ್ನು ಆಧರಿಸಿಕೊಂಡು ಅವರ ಚಿತ್ರಕಲಾ ಚಿಂತನೆಯ ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಕಾರಂತರ ಚಿತ್ರಕಲಾ ಚಿಂತನೆಯು ಕನ್ನಡದಲ್ಲಿ ಕಲಾ ವಿಮರ್ಶೆಯ ಬೆಳವಣಿಗೆಗೆ ಮಾತ್ರವಲ್ಲದೆ ಕಲಾಸಂಸ್ಕಾರ, ಸೌಂದರ್ಯಪ್ರಜ್ಞೆ ಮತ್ತು ದೃಶ್ಯಸಾಕ್ಷರತೆಯ ನಿರ್ಮಾಣಕ್ಕೂ ಮಹತ್ವದ ಕೊಡುಗೆ ನೀಡಿದೆ ಎಂಬುದು ಈ ಅಧ್ಯಯನದ ಮುಖ್ಯ ಪ್ರತಿಪಾದನೆಯಾಗಿದೆ.

**ಪ್ರಮುಖ ಪದಗಳು (Keywords):** ಶಿವರಾಮ ಕಾರಂತ, ಚಿತ್ರಕಲೆ, ಕಲಾ ವಿಮರ್ಶೆ, ಸೌಂದರ್ಯಪ್ರಜ್ಞೆ, ಕಲಾಸಂಸ್ಕಾರ, ಭಾರತೀಯ ಚಿತ್ರಕಲೆ, ಕರ್ನಾಟಕದ ಚಿತ್ರಕಲೆ, ಪಾಶ್ಚಿಮಾತ್ಯ ಕಲೆ, ಆಧುನಿಕ ಕಲೆ, ದೃಶ್ಯಕಲೆ, ಕಲಾ ಶಿಕ್ಷಣ.

## ಪ್ರಸ್ತಾವನೆ (Introduction):

ಭಾರತೀಯ ಕಲಾ ಚಿಂತನೆಯ ಆಧುನಿಕ ಬೆಳವಣಿಗೆಯಲ್ಲಿ ಕಲೆಯನ್ನು ಕೇವಲ ಸೌಂದರ್ಯಾನುಭವದ ಮಾಧ್ಯಮವಾಗಿ ನೋಡದೆ ಅದನ್ನು ಜೀವನ, ಸಂಸ್ಕೃತಿ, ಸಮಾಜ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಜೋಡಿಸಿದ ಚಿಂತಕರ ಪಾತ್ರ ಮಹತ್ವದ್ದಾಗಿದೆ. ಆನಂದ ಕುಮಾರಸ್ವಾಮಿ ಭಾರತೀಯ ಕಲೆಯ ತಾತ್ವಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು


Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಜಾಗತಿಕ ಮಟ್ಟದಲ್ಲಿ ಪ್ರತಿಪಾದಿಸಿದರು. ಅಬನೀಂದ್ರನಾಥ ಠಾಕೂರ್ ಭಾರತೀಯ ಚಿತ್ರಕಲೆಯ ರಾಷ್ಟ್ರೀಯ ಸ್ವರೂಪವನ್ನು ಪುನರುಜ್ಜೀವನಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ನಂದಲಾಲ್ ಬೋಸ್ ಭಾರತೀಯ ಪರಂಪರೆ, ಜನಪದ ಕಲೆ ಮತ್ತು ಆಧುನಿಕ ಕಲಾಭಿವ್ಯಕ್ತಿಗಳ ನಡುವೆ ಸೃಜನಾತ್ಮಕ ಸೇತುವೆಯನ್ನು ನಿರ್ಮಿಸಿದರು. ಕನ್ನಡದ ಬಹುಮುಖ ಪ್ರತಿಭೆಯಾದ ಕೆ. ಶಿವರಾಮ ಕಾರಂತರು ಸಾಹಿತ್ಯ, ರಂಗಭೂಮಿ, ಯಕ್ಷಗಾನ, ಚಿತ್ರಕಲೆ, ನೃತ್ಯ, ಸಂಗೀತ ಹಾಗೂ ಜನಪದ ಸಂಸ್ಕೃತಿಯ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಕಲಾ ದೃಷ್ಟಿಕೋನವನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ

ಕನ್ನಡ ಸಾಹಿತ್ಯದ ಆಧುನಿಕ ಪರಂಪರೆಯನ್ನು ಪರಿಶೀಲಿಸಿದಾಗ ಶಿವರಾಮ ಕಾರಂತರ ಹೆಸರು ಅತ್ಯಂತ ವಿಶಿಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಸಾಹಿತ್ಯವನ್ನು ಕೇವಲ ಒಂದು ಸೃಜನಾತ್ಮಕ ಕ್ಷೇತ್ರವೆಂದು ಪರಿಗಣಿಸದೆ ಜೀವನದ ವಿವಿಧ ಆಯಾಮಗಳೊಂದಿಗೆ ಅದನ್ನು ಸಂಬಂಧಿಸಿದಂತೆ ನೋಡುವುದು ಅವರ ವೈಶಿಷ್ಟ್ಯ. ಕಾದಂಬರಿ, ಸಣ್ಣಕಥೆ, ನಾಟಕ, ಪ್ರವಾಸ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಕ್ಕಳ ಸಾಹಿತ್ಯ, ಪರಿಸರ ಚಿಂತನೆ, ಯಕ್ಷಗಾನ, ಸಮಾಜಚಿಂತನೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಅವರು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಿದ್ದಾರೆ. ಇದೇ ಬಹುಮುಖ ಆಸಕ್ತಿ ಚಿತ್ರಕಲೆ ಮತ್ತು ದೃಶ್ಯಕಲೆಗಳ ಕ್ಷೇತ್ರದಲ್ಲಿಯೂ ವ್ಯಕ್ತವಾಗಿದೆ.

ಕಾರಂತರ ಚಿತ್ರಕಲಾ ಬರಹಗಳನ್ನು ಗಮನಿಸಿದಾಗ ಅವರು ಕೇವಲ ಚಿತ್ರಗಳನ್ನು ವಿವರಿಸುವ ಲೇಖಕರಲ್ಲ ಎಂಬುದು ಸ್ಪಷ್ಟವಾಗುತ್ತದೆ. ಚಿತ್ರವನ್ನು ಹೇಗೆ ನೋಡಬೇಕು? ಒಂದು ಕಲಾಕೃತಿಯ ಸೌಂದರ್ಯವನ್ನು ಯಾವ ಮಾನದಂಡಗಳಿಂದ ಗುರುತಿಸಬೇಕು? ಕಲಾವಿದನ ಮನಸ್ಸು ಕಲಾಕೃತಿಯಲ್ಲಿ ಹೇಗೆ ವ್ಯಕ್ತವಾಗುತ್ತದೆ? ರೇಖೆ, ಬಣ್ಣ, ಆಕಾರ ಮತ್ತು ಸಂಯೋಜನೆಗಳು ಕಲಾಕೃತಿಯ ಸೌಂದರ್ಯವನ್ನು ಹೇಗೆ ರೂಪಿಸುತ್ತವೆ? ನೋಡುಗನಿಗೆ ಕಲಾಸಂಸ್ಕಾರ ಏಕೆ ಅಗತ್ಯ? ಭಾರತೀಯ ಮತ್ತು ಪಾಶ್ಚಿಮಾತ್ಯ ಕಲಾ ಪರಂಪರೆಗಳಲ್ಲಿ ಇರುವ ವ್ಯತ್ಯಾಸಗಳೇನು? ಆಧುನಿಕ ಕಲೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಇಂತಹ ಪ್ರಶ್ನೆಗಳು ಅವರ ಕಲಾ ಬರಹಗಳ ಕೇಂದ್ರದಲ್ಲಿವೆ. ಕಾರಂತರಿಗೆ ಚಿತ್ರಕಲೆ ಕೇವಲ ಮನರಂಜನೆ ಅಥವಾ ಅಲಂಕಾರಿಕ ವಸ್ತುವಲ್ಲ. ಅದು ಮನುಷ್ಯನ ಸೌಂದರ್ಯಪ್ರಜ್ಞೆ, ಸಂಸ್ಕೃತಿ, ಚಿಂತನೆ ಮತ್ತು ಜೀವನಾನುಭವಗಳೊಂದಿಗೆ ಸಂಬಂಧಿಸಿದ ಒಂದು ಪ್ರಮುಖ ಅಭಿವ್ಯಕ್ತಿ ಮಾಧ್ಯಮ. ಈ ಕಾರಣದಿಂದಲೇ ಅವರು ಚಿತ್ರಕಲೆಯನ್ನು ಜನಸಾಮಾನ್ಯರ ಜೀವನದ ಭಾಗವಾಗಿಸಬೇಕೆಂದು ಆಶಿಸಿದರು.

ಭಾರತೀಯ ಸಮಾಜದಲ್ಲಿ ಚಿತ್ರಕಲೆಗೆ ದೊರೆಯುತ್ತಿದ್ದ ಕಡಿಮೆ ಸ್ಥಾನಮಾನವು ಕಾರಂತರನ್ನು ನಿರಂತರವಾಗಿ ಕಾಡುತ್ತಿತ್ತು. ಪಾಶ್ಚಿಮಾತ್ಯ ಸಮಾಜದಲ್ಲಿ ಕಲೆ ಬದುಕಿನ ಒಂದು ಅಂಗವಾಗಿ ಬೆಳೆದಿರುವುದನ್ನು ಅವರು ಗಮನಿಸಿದರು. ಅದರೊಂದಿಗೆ ಹೋಲಿಸಿದಾಗ ಭಾರತೀಯ ಸಮಾಜದಲ್ಲಿ ಚಿತ್ರಕಲೆಯನ್ನು ನೋಡುವ ಮತ್ತು ಆಸ್ವಾದಿಸುವ ಸಾಂಸ್ಕೃತಿಕ ತರಬೇತಿ ಕಡಿಮೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಅವರ ಚಿತ್ರಕಲಾ ಚಿಂತನೆ ಕೇವಲ ಕಲಾವಿಮರ್ಶೆಯಾಗಿ ಉಳಿಯದೆ ಒಂದು ರೀತಿಯ ಸಾಂಸ್ಕೃತಿಕ ವಿಮರ್ಶೆಯಾಗಿ ರೂಪುಗೊಳ್ಳುತ್ತದೆ.

ಶಿವರಾಮ ಕಾರಂತರ ಸಾಹಿತ್ಯ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಅವರ ಚಿತ್ರಕಲಾ ಚಿಂತನೆಯ ವ್ಯಾಪ್ತಿ ಮತ್ತು ವೈಶಿಷ್ಟ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡುವ ಅಗತ್ಯ ಇನ್ನೂ ಇದೆ. ಕಾರಂತರ ಚಿತ್ರಕಲಾ ಬರಹಗಳನ್ನು ಪ್ರತ್ಯೇಕ ಲೇಖನಗಳಾಗಿ ಓದುವುದಕ್ಕಿಂತ ಅವುಗಳ ಹಿಂದಿರುವ ಒಟ್ಟು ಕಲಾದೃಷ್ಟಿಯನ್ನು ಗುರುತಿಸುವುದು ಮುಖ್ಯ. ಕಾರಂತರ ಚಿತ್ರಕಲಾ ಚಿಂತನೆಗೆ ಸಂಬಂಧಿಸಿದ ಅವರ ಮೂಲ ಕೃತಿಗಳು, ಕಲಾ ಲೇಖನಗಳು, ಆತ್ಮಕಥನಾತ್ಮಕ ಬರಹಗಳು ಮತ್ತು ಕಲಾವಿದರ ಕುರಿತು ಬರೆದ ಕೃತಿಗಳನ್ನು ಈ ಸಂಶೋಧನಾ ಲೇಖನದಲ್ಲಿ ಆಕರಗಳಾಗಿ ಪರಿಗಣಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ: ಭಾರತೀಯ ಚಿತ್ರಕಲೆ, ಕಲೆಯ ದರ್ಶನ, ಕರ್ನಾಟಕದಲ್ಲಿ ಚಿತ್ರಕಲೆ, ಕಲಾಪ್ರಪಂಚ, ಸೌಂದರ್ಯ ಪ್ರಜ್ಞೆಯನ್ನು ಬೆಳೆಯಿಸಲು,

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸ್ಮೃತಿಪಟಲದಿಂದ, ಹುಚ್ಚುಮನಸ್ಸಿನ ಹತ್ತು ಮುಖಗಳು, ಕಲಾವಿದ ಕೃಷ್ಣ ಹೆಬ್ಬಾರರು ಮೊದಲಾದ ಅವರ ಕೃತಿಗಳನ್ನು ಈ ಅಧ್ಯಯನದ ಆಧಾರವಾಗಿ ಬಳಸಲಾಗಿದೆ.

ಕಾರಂತರ ಚಿತ್ರಕಲಾ ಆಸಕ್ತಿ ಬಾಲ್ಯದಲ್ಲಿಯೇ ರೂಪುಗೊಂಡಿತು. ಅವರು ಹುಟ್ಟಿ ಬೆಳೆದ ಪರಿಸರದಲ್ಲಿ ಶಾಸ್ತ್ರೀಯ ಚಿತ್ರಕಲೆ ಅಥವಾ ಶಿಲ್ಪಕಲೆಯನ್ನು ಪರಿಚಯಿಸುವಂತಹ ವ್ಯವಸ್ಥಿತ ಸಾಂಸ್ಕೃತಿಕ ವಾತಾವರಣ ಇರಲಿಲ್ಲ. ಆದರೂ ಜಾತ್ರೆಯ ತೇರುಗಳ ಮೇಲಿನ ಚಿತ್ರಗಳು, ಮರದ ಹಲಗೆಗಳ ಮೇಲಿನ ಚಿತ್ರಣಗಳು, ನಾಟಕದ ಪರದೆಗಳ ಮೇಲಿನ ದೃಶ್ಯಗಳು ಮತ್ತು ರಾಜಾ ರವಿವರ್ಮನ ಮುದ್ರಿತ ಚಿತ್ರಗಳು ಅವರ ಬಾಲಮನಸ್ಸಿನ ಮೇಲೆ ಪ್ರಭಾವ ಬೀರಿದವು. ಈ ಅನುಭವಗಳು ಅವರ ಕಲಾಸಂವೇದನೆಯ ಮೊದಲ ಹಂತವೆಂದು ಪರಿಗಣಿಸಬಹುದು. ಶಾಲೆಯಲ್ಲಿ ಚಿತ್ರಕಲೆ ಒಂದು ವಿಷಯವಾಗಿದ್ದರೂ ಅದು ಅವರ ಕಲಾ ಆಸಕ್ತಿಯನ್ನು ನಿರ್ದಿಷ್ಟ ರೀತಿಯಲ್ಲಿ ರೂಪಿಸಲಿಲ್ಲ. ಬದಲಿಗೆ ಸ್ವಯಂ ಅಧ್ಯಯನ, ಪ್ರವಾಸ ಮತ್ತು ನೇರ ಕಲಾನುಭವಗಳ ಮೂಲಕ ಅವರ ಕಲಾದೃಷ್ಟಿ ಬೆಳೆಯಿತು. ಇದು ಕಾರಂತರ ವ್ಯಕ್ತಿತ್ವದ ಪ್ರಮುಖ ಲಕ್ಷಣವೊಂದನ್ನು ತೋರಿಸುತ್ತದೆ. ಅವರು ಯಾವುದೇ ಕ್ಷೇತ್ರದ ಜ್ಞಾನವನ್ನು ಕೇವಲ ಪುಸ್ತಕಗಳ ಮೂಲಕ ಸ್ವೀಕರಿಸುವವರಲ್ಲ. ಅನುಭವ, ವೀಕ್ಷಣೆ, ಪ್ರವಾಸ ಮತ್ತು ಸ್ವಯಂ ಅಧ್ಯಯನಗಳ ಮೂಲಕ ಜ್ಞಾನವನ್ನು ಗಳಿಸುವುದು ಅವರ ವೈಶಿಷ್ಟ್ಯ.

ಕಾರಂತರ ಕಲಾ ಚಿಂತನೆಯ ಬೆಳವಣಿಗೆಯಲ್ಲಿ ಪ್ರವಾಸಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸಿತ್ತನ್ನವಾಸಲ್, ಅಜಂತಾ, ಎಲ್ಲೋರಾ, ಖಜುರಾಹೋ ಮೊದಲಾದ ಭಾರತೀಯ ಕಲಾಕೇಂದ್ರಗಳಿಗೆ ಅವರು ಭೇಟಿ ನೀಡಿದರು. ಈ ಪ್ರವಾಸಗಳು ಅವರ ಕಲಾ ಜ್ಞಾನವನ್ನು ಕೇವಲ ಪುಸ್ತಕಾಧಾರಿತವಾಗಿರದಂತೆ ಮಾಡಿದವು. ಕಲಾಕೃತಿಯನ್ನು ಅದರ ನೈಸರ್ಗಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ನೋಡುವ ಅವಕಾಶ ಅವರಿಗೆ ದೊರೆಯಿತು. ಮುಂದೆ ವಿದೇಶ ಪ್ರವಾಸಗಳ ಮೂಲಕ ಯೂರೋಪಿನ ಕಲಾಕೃತಿಗಳನ್ನು ನೇರವಾಗಿ ನೋಡಿದರು. ಪಾಶ್ಚಿಮಾತ್ಯ ಕಲೆಯ ತಾಂತ್ರಿಕ ಪ್ರಯೋಗ, ಕಲಾವಿದನ ಸ್ವಾತಂತ್ರ್ಯ ಮತ್ತು ಹೊಸತನವು ಅವರನ್ನು ಆಕರ್ಷಿಸಿತು. ಅವರ ದೃಷ್ಟಿಯಲ್ಲಿ ಪ್ರವಾಸವು ಕೇವಲ ಸ್ಥಳಾಂತರವಲ್ಲ. ಅದು ಜ್ಞಾನ ಮತ್ತು ಅನುಭವವನ್ನು ವಿಸ್ತರಿಸುವ ಒಂದು ವಿಧಾನ. ಕಲೆಯನ್ನು ನೇರವಾಗಿ ನೋಡುವುದರ ಮೂಲಕ ಕಲೆಯ ಕುರಿತು ಪುಸ್ತಕಗಳಲ್ಲಿ ಓದಲಾಗದ ಅನೇಕ ಸಂಗತಿಗಳನ್ನು ಅರಿಯಬಹುದು ಎಂಬ ನಂಬಿಕೆ ಅವರಲ್ಲಿತ್ತು.

ಕಾರಂತರ ಭಾರತೀಯ ಚಿತ್ರಕಲಾ ಚಿಂತನೆಯು ಎರಡು ಮುಖಗಳನ್ನು ಹೊಂದಿದೆ. ಒಂದೆಡೆ ಭಾರತೀಯ ಕಲಾ ಪರಂಪರೆಯ ಬಗ್ಗೆ ಅವರಿಗೆ ಅಪಾರ ಗೌರವವಿದೆ. ಅಜಂತಾ, ಮುಘಲ್, ರಾಜಸ್ಥಾನಿ, ದಕ್ಷಿಣ ಭಾರತೀಯ ಮತ್ತು ಕರ್ನಾಟಕದ ಕಲಾಪರಂಪರೆಗಳ ಕುರಿತು ಅವರು ಆಸಕ್ತಿಯಿಂದ ಅಧ್ಯಯನ ಮಾಡಿದ್ದಾರೆ. ಮತ್ತೊಂದೆಡೆ ಭಾರತೀಯ ಸಮಾಜದಲ್ಲಿ ಚಿತ್ರಕಲೆಗೆ ದೊರೆಯದ ಸ್ಥಾನಮಾನದ ಕುರಿತು ಅವರಿಗೆ ಅಸಮಾಧಾನವಿದೆ. ಭಾರತೀಯ ಕಲೆಯ ಮಹತ್ವವನ್ನು ಜನರಿಗೆ ಪರಿಚಯಿಸುವುದಷ್ಟೇ ಸಾಕಾಗುವುದಿಲ್ಲ. ಜನರು ಅದನ್ನು ನೋಡುವ, ಅರ್ಥಮಾಡಿಕೊಳ್ಳುವ ಮತ್ತು ಆಸ್ವಾದಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂಬುದು ಅವರ ಆಶಯ. ಈ ಕಾರಣದಿಂದಲೇ ಅವರ ಕಲಾ ಬರಹಗಳಲ್ಲಿ ಕಲಾಕೃತಿಯ ವಿವರಣೆಯೊಂದಿಗೆ 'ಅದನ್ನು ಹೇಗೆ ನೋಡಬೇಕು?' ಎಂಬ ಪ್ರಶ್ನೆಯೂ ನಿರಂತರವಾಗಿ ಎದುರಾಗುತ್ತದೆ.

ಪಾಶ್ಚಿಮಾತ್ಯ ಕಲೆಯ ಕುರಿತು ಕಾರಂತರಲ್ಲಿ ಕುತೂಹಲ ಮತ್ತು ಮೆಚ್ಚುಗೆ ಎರಡೂ ಇದ್ದವು. ವಿಶೇಷವಾಗಿ ಯೂರೋಪಿನ ಕಲಾವಿದರ ಪ್ರಯೋಗಶೀಲತೆ, ತಾಂತ್ರಿಕ ಪರಿಣತಿ ಮತ್ತು ಕಲಾತ್ಮಕ ಸ್ವಾತಂತ್ರ್ಯ ಅವರಿಗೆ ಗಮನಾರ್ಹವೆನಿಸಿತು. ಆದರೆ ಪಾಶ್ಚಿಮಾತ್ಯ ಕಲೆಯ ಅಂಧಾನುಕರಣವನ್ನು ಅವರು ಒಪ್ಪಲಿಲ್ಲ. ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಕಲಾರೂಪಗಳನ್ನು ನೇರವಾಗಿ ವರ್ಗಾಯಿಸಲಾಗುವುದಿಲ್ಲ ಎಂಬ ಅರಿವು ಅವರಲ್ಲಿತ್ತು. ಅವರ ದೃಷ್ಟಿಯಲ್ಲಿ ಪಾಶ್ಚಿಮಾತ್ಯ ಕಲೆಯಿಂದ ಕಲಿಯಬೇಕಾದದ್ದು ಅದರ ಸ್ವಾತಂತ್ರ್ಯ, ಪ್ರಯೋಗಶೀಲತೆ, ತಾಂತ್ರಿಕ ಶಿಸ್ತು ಮತ್ತು ಕಲೆಯ ಕುರಿತು ಇರುವ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಗಂಭೀರತೆ. ಕೇವಲ ಬಾಹ್ಯ ರೂಪಗಳನ್ನು ಅನುಕರಿಸುವುದು ಆಧುನಿಕತೆಯಲ್ಲ. ಇಲ್ಲಿ ಕಾರಂತರ ಕಲಾ ಚಿಂತನೆಯಲ್ಲಿರುವ ವಿಮರ್ಶಾತ್ಮಕ ವಿವೇಕ ಗೋಚರಿಸುತ್ತದೆ.

ಕಾರಂತರ ಕಲಾ ಚಿಂತನೆಯ ಪ್ರಮುಖ ಕೇಂದ್ರ ಕಲಾವಿದನ ಮನಸ್ಸು. ಅವರ ಪ್ರಕಾರ ಕಲಾಕೃತಿ ಕೇವಲ ಹೊರಜಗತ್ತಿನ ಪ್ರತಿಬಿಂಬವಲ್ಲ. ಅದು ಕಲಾವಿದನ ಅನುಭವ, ಸಂವೇದನೆ, ಕಲ್ಪನೆ ಮತ್ತು ಆಂತರಿಕ ಮನಸ್ಥಿತಿಗಳ ಸೃಜನಾತ್ಮಕ ರೂಪಾಂತರ. ಕಲಾವಿದನು ತನ್ನ ಅನುಭವಗಳನ್ನು ರೇಖೆ, ಬಣ್ಣ, ಆಕಾರ ಮತ್ತು ಸಂಯೋಜನೆಯ ಮೂಲಕ ದೃಶ್ಯರೂಪಕ್ಕೆ ತರುತ್ತಾನೆ. ಈ ಪ್ರಕ್ರಿಯೆಯಲ್ಲಿ ಕಲಾವಿದನ ವೈಯಕ್ತಿಕತೆ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ಎರಡು ಕಲಾವಿದರು ಒಂದೇ ವಿಷಯವನ್ನು ಚಿತ್ರಿಸಿದರೂ ಅವರ ಕೃತಿಗಳು ಒಂದೇ ರೀತಿಯಾಗಿರುವುದಿಲ್ಲ. ಕಾರಣ ಅವರ ಅನುಭವ, ದೃಷ್ಟಿ, ಸಂವೇದನೆ ಮತ್ತು ಕಲ್ಪನೆಗಳು ವಿಭಿನ್ನವಾಗಿರುತ್ತವೆ. ಈ ವಿಚಾರವು ಕಾರಂತರ ಕಲಾ ಚಿಂತನೆಗೆ ವ್ಯಕ್ತಿಕೇಂದ್ರಿತ ಮತ್ತು ಮನೋವೈಜ್ಞಾನಿಕ ಆಯಾಮವನ್ನು ನೀಡುತ್ತದೆ.

ಕಾರಂತರ ಸೌಂದರ್ಯಪ್ರಜ್ಞೆಯ ಪ್ರಮುಖ ಲಕ್ಷಣವೆಂದರೆ ಕಲಾಕೃತಿಯ ವಿಷಯಕ್ಕಿಂತ ಅದರ ಕಲಾತ್ಮಕ ವಿನ್ಯಾಸಕ್ಕೆ ನೀಡುವ ಮಹತ್ವ. ಒಂದು ಚಿತ್ರದಲ್ಲಿ ಏನು ಚಿತ್ರಿಸಲಾಗಿದೆ ಎಂಬ ಪ್ರಶ್ನೆಯಷ್ಟೇ ಮುಖ್ಯವಲ್ಲ. ಅದನ್ನು ಹೇಗೆ ಚಿತ್ರಿಸಲಾಗಿದೆ ಎಂಬ ಪ್ರಶ್ನೆಯೂ ಅಷ್ಟೇ ಮುಖ್ಯ. ರೇಖೆಯ ಚಲನೆ, ಬಣ್ಣಗಳ ಹೊಂದಾಣಿಕೆ, ಬೆಳಕು–ನೆರಳು, ಆಕಾರ, ಸ್ಥಳವಿನ್ಯಾಸ, ಸಮತೋಲನ, ಲಯ ಮತ್ತು ಸಂಯೋಜನೆಗಳು ಕಲಾಕೃತಿಯ ಸೌಂದರ್ಯವನ್ನು ನಿರ್ಧರಿಸುತ್ತವೆ. ಈ ದೃಷ್ಟಿಯಿಂದ ಕಾರಂತರ ಕಲಾ ವಿಮರ್ಶೆ ವಿಷಯಾಧಾರಿತ ವಿಮರ್ಶೆಯಿಂದ ರೂಪಾಧಾರಿತ ವಿಮರ್ಶೆಯ ಕಡೆಗೆ ಸಾಗುತ್ತದೆ.

ಕಾರಂತರ ಕಲಾ ಚಿಂತನೆಯ ಅತ್ಯಂತ ಪ್ರಸ್ತುತವಾದ ಅಂಶಗಳಲ್ಲಿ ನೋಡುಗನ ಪಾತ್ರವೂ ಒಂದು. ಕಲಾಕೃತಿಯನ್ನು ಅರ್ಥಮಾಡಿಕೊಳ್ಳಲು ಕಲಾವಿದನಿಗೆ ಇರುವ ತರಬೇತಿಯಷ್ಟೇ ನೋಡುಗನಿಗೂ ಒಂದು ರೀತಿಯ ತರಬೇತಿ ಅಗತ್ಯ. ಕಲೆಯನ್ನು ನೋಡುವ ಕಣ್ಣು ಸಹ ಪಳಗಬೇಕು. "ನಮಗೆ ಅರ್ಥವಾಗಲಿಲ್ಲ" ಅಥವಾ "ನಮಗೆ ಇಷ್ಟವಾಗಲಿಲ್ಲ" ಎಂಬ ಪ್ರತಿಕ್ರಿಯೆ ಕಲೆಯ ಮೌಲ್ಯಮಾಪನಕ್ಕೆ ಸಾಕಾಗುವುದಿಲ್ಲ. ಕಲೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಇಲ್ಲಿ ಕಾರಂತರು 'ಕಲಾಸಂಸ್ಕಾರ' ಎಂಬ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಕಲಾಸಂಸ್ಕಾರ ಎಂದರೆ ಕೇವಲ ಕಲೆಯ ಬಗ್ಗೆ ಮಾಹಿತಿ ಹೊಂದಿರುವುದು ಅಲ್ಲ. ಕಲಾಕೃತಿಯ ಸೂಕ್ಷ್ಮತೆಯನ್ನು ಗ್ರಹಿಸುವ ಸಾಮರ್ಥ್ಯ, ಸೌಂದರ್ಯವನ್ನು ಅನುಭವಿಸುವ ಮನಸ್ಸು ಮತ್ತು ಭಿನ್ನ ಕಲಾಪರಂಪರೆಗಳನ್ನು ಸ್ವೀಕರಿಸುವ ಮನೋಭಾವವೂ ಅದರ ಭಾಗ.

ಕಾರಂತರು ವೃತ್ತಿಪರ ಚಿತ್ರಕಾರರಾಗಿರಲಿಲ್ಲ. ಆದರೂ ಅವರು ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ಬಾಲಪ್ರಪಂಚ, ವಿಜ್ಞಾನಪ್ರಪಂಚ ಮತ್ತು ಕಲಾಪ್ರಪಂಚ ಮೊದಲಾದ ಕೃತಿಗಳಲ್ಲಿ ಅವರದೇ ಚಿತ್ರಗಳು ಮತ್ತು ರೇಖಾಚಿತ್ರಗಳು ಕಾಣಿಸುತ್ತವೆ. ಪುಸ್ತಕಗಳ ಮುಖಪುಟಗಳನ್ನು ತಾವೇ ರಚಿಸುವುದು, ಮೂಲ ಚಿತ್ರಗಳ ಪ್ರತಿರೂಪಗಳನ್ನು ಸಿದ್ಧಪಡಿಸುವುದು ಮತ್ತು ವಿವರಣಾತ್ಮಕ ಚಿತ್ರಗಳನ್ನು ನೀಡುವುದು ಅವರ ಚಿತ್ರಕಲಾ ಚಟುವಟಿಕೆಯ ಭಾಗವಾಗಿತ್ತು. ಅವರ ಚಿತ್ರಗಳಲ್ಲಿ ಶಾಸ್ತ್ರೀಯ ತರಬೇತಿಯ ಕೊರತೆ ಕಂಡುಬಂದರೂ ಅವುಗಳಲ್ಲಿ ಭಾವನಾತ್ಮಕತೆ ಮತ್ತು ವಿಷಯವನ್ನು ದೃಶ್ಯರೂಪದಲ್ಲಿ ವಿವರಿಸುವ ಸಾಮರ್ಥ್ಯವಿದೆ. ಇಲ್ಲಿ ಕಾರಂತರ ಕಲಾವಿದನ ರೂಪವನ್ನು ವೃತ್ತಿಪರ ಚಿತ್ರಕಾರನಾಗಿ ನೋಡುವುದಕ್ಕಿಂತ ಕಲೆಯನ್ನು ಅನುಭವಿಸುವ ಮತ್ತು ವಿವಿಧ ಮಾಧ್ಯಮಗಳ ಮೂಲಕ ಅಭಿವ್ಯಕ್ತಿಸುವ ಸೃಜನಶೀಲ ವ್ಯಕ್ತಿಯಾಗಿ ನೋಡುವುದು ಹೆಚ್ಚು ಸೂಕ್ತ.

ಕಾರಂತರ ಚಿತ್ರಕಲಾ ಜ್ಞಾನವು ಅವರ ಚಿತ್ರಕಲಾವಿದರೊಂದಿಗಿನ ಒಡನಾಟದಿಂದಲೂ ವಿಸ್ತರಿಸಿತು. ಪುರುಷೋತ್ತಮ ತೋಳ್ಪಾಡಿ, ಮಾಗ್ದಾ ನಾಚುಮನ್ ಮತ್ತು ಕೆ.ಕೆ. ಹೆಬ್ಬಾರರಂತಹ ಕಲಾವಿದರೊಂದಿಗೆ ಅವರು ಹೊಂದಿದ್ದ ಸಂಪರ್ಕವು ಅವರ ಕಲಾ ಚಿಂತನೆಯ ಬೆಳವಣಿಗೆಯಲ್ಲಿ ಮಹತ್ವದ್ದಾಗಿದೆ. ವಿಶೇಷವಾಗಿ ಕೆ.ಕೆ. ಹೆಬ್ಬಾರರೊಂದಿಗಿನ ಅವರ ಸಂಬಂಧವು ಕಲಾ


Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸ್ನೇಹದ ವಿಶಿಷ್ಟ ಉದಾಹರಣೆಯಾಗಿದೆ. ಹೆಬ್ಬಾರರ ಕೃತಿಗಳ ಕುರಿತು ಬರೆದದ್ದು ಮಾತ್ರವಲ್ಲದೆ ಅವರ ಕಲಾ ಪ್ರದರ್ಶನಗಳಿಗೆ ಸಹಕಾರ ನೀಡಿದ್ದು ಕಾರಂತರ ಕಲಾ ಚಿಂತನೆ ಕಾರ್ಯರೂಪಕ್ಕೂ ಇಳಿದಿದ್ದುದನ್ನು ತೋರಿಸುತ್ತದೆ.

ಕರ್ನಾಟಕದ ಚಿತ್ರಕಲೆಯ ಕುರಿತು ಕಾರಂತರ `ಕರ್ನಾಟಕದಲ್ಲಿ ಚಿತ್ರಕಲೆ' ಕೃತಿ ಮಹತ್ವದ್ದಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಚಿತ್ರಕಲಾ ಪರಂಪರೆಗಳನ್ನು ಪರಿಚಯಿಸುವ ಉದ್ದೇಶ ಈ ಕೃತಿಯಲ್ಲಿದೆ. ಅಪರಿಚಿತವಾಗಿದ್ದ ಕೆಲವು ಸ್ಥಳಗಳು ಮತ್ತು ಕಲಾಕೃತಿಗಳ ಕುರಿತು ಮಾಹಿತಿ ನೀಡುವ ಮೂಲಕ ಅವರು ಕಲಾ ಇತಿಹಾಸದ ದಾಖಲಾತಿಗೆ ನೆರವಾಗಿದ್ದಾರೆ. ಆದರೆ ಈ ಕೃತಿಗೆ ಕೆಲವು ಮಿತಿಗಳೂ ಇವೆ. ಕಾರಂತರಿಗಿಂತ ಮೊದಲು ಪ್ರಕಟವಾಗಿದ್ದ ಪುರಾತತ್ವ ವರದಿಗಳು, ಗ್ಯಾಸೆಟಿಯರ್‌ಗಳು ಮತ್ತು ಸಂಶೋಧನಾ ದಾಖಲೆಗಳನ್ನು ಅವರು ಎಲ್ಲ ಸಂದರ್ಭಗಳಲ್ಲಿಯೂ ಸಮರ್ಪಕವಾಗಿ ಬಳಸಿಕೊಂಡಿಲ್ಲ. ಇದರಿಂದ ಅವರ ಕೆಲವು ನಿರೂಪಣೆಗಳು ನೇರ ಪ್ರವಾಸಾನುಭವದ ದಾಖಲೆಯಂತಾಗುತ್ತವೆ. ಆದರೂ ಕಲಾಕೃತಿಗಳನ್ನು ಜನಸಾಮಾನ್ಯರ ಗಮನಕ್ಕೆ ತಂದು ಅವುಗಳ ಬಗ್ಗೆ ಆಸಕ್ತಿ ಹುಟ್ಟಿಸಿದ ಅವರ ಪ್ರಯತ್ನವನ್ನು ನಿರ್ಲಕ್ಷಿಸಲಾಗುವುದಿಲ್ಲ.

1978ರಲ್ಲಿ ಪ್ರಕಟವಾದ 'ಕಲಾಪ್ರಪಂಚ' ಕಾರಂತರ ಕಲಾ ಚಿಂತನೆಯ ಪರಿಪಕ್ವ ಹಂತವನ್ನು ಪ್ರತಿನಿಧಿಸುವ ಕೃತಿ. ಇದು ಕೇವಲ ಚಿತ್ರಕಲೆಯ ಪರಿಚಯ ನೀಡುವ ಕೃತಿಯಲ್ಲ. ಕಲೆ, ಕಲಾವಿದ, ಕಲಾ ಇತಿಹಾಸ, ಕಲಾ ಸಿದ್ಧಾಂತ, ಚಿತ್ರಕಲೆಯ ವ್ಯಾಕರಣ, ಬಣ್ಣ, ರೇಖೆ, ದೃಶ್ಯವಿನ್ಯಾಸ, ಸೌಂದರ್ಯ, ಭಾರತೀಯ ಮತ್ತು ಪಾಶ್ಚಿಮಾತ್ಯ ಕಲಾ ಪರಂಪರೆ ಮೊದಲಾದ ವಿವಿಧ ವಿಷಯಗಳನ್ನು ಒಳಗೊಂಡ ವಿಶಾಲ ಕೃತಿ. ಕನ್ನಡದಲ್ಲಿ ಕಲೆಯ ಕುರಿತು ವಿಶ್ವಕೋಶದ ಸ್ವರೂಪದ ಬೃಹತ್ ಕೃತಿಯನ್ನು ರಚಿಸುವುದು ಸ್ವತಃ ಒಂದು ಮಹತ್ವದ ಸಾಂಸ್ಕೃತಿಕ ಪ್ರಯತ್ನ. ಈ ಹಿನ್ನೆಲೆಯಲ್ಲಿ 'ಕಲಾಪ್ರಪಂಚ'ವನ್ನು ಕನ್ನಡದ ಕಲಾ ಜ್ಞಾನವನ್ನು ವ್ಯವಸ್ಥಿತಗೊಳಿಸುವ ಪ್ರಯತ್ನವೆಂದು ಪರಿಗಣಿಸಬಹುದು.

ಆಧುನಿಕ ಕಲೆಯ ಕುರಿತು ಕಾರಂತರ ನಿಲುವು ಸರಳವಾದ ಸ್ವೀಕಾರ ಅಥವಾ ನಿರಾಕರಣೆಯಲ್ಲ. ಅವರು ಆಧುನಿಕ ಕಲೆಯ ಬದಲಾವಣೆಗಳನ್ನು ಗಮನಿಸಿದರು. ಅಮೂರ್ತ ಚಿತ್ರಕಲೆ ಮತ್ತು ಹೊಸ ಕಲಾಪ್ರಯೋಗಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ತಮಗೆ ಸಂಪೂರ್ಣವಾಗಿ ಅರ್ಥವಾಗದ ವಿಷಯವನ್ನು ಅರ್ಥವಾಗಿದೆ ಎಂದು ಹೇಳುವ ಬೌದ್ಧಿಕ ಅಹಂಕಾರವನ್ನು ಅವರು ತೋರಲಿಲ್ಲ. ಇದು ಅವರ ವಿಮರ್ಶಾತ್ಮಕ ಪ್ರಾಮಾಣಿಕತೆಯ ಸೂಚಕ. ಆದರೆ ಆಧುನಿಕತೆಯ ಹೆಸರಿನಲ್ಲಿ ಯಾವುದೇ ರೀತಿಯ ಚಿತ್ರಣವನ್ನು ಕಲಾಕೃತಿಯೆಂದು ಒಪ್ಪಿಕೊಳ್ಳುವುದನ್ನು ಅವರು ವಿರೋಧಿಸಿದರು. ಕಲಾವಿದನಿಗೆ ಕಲಾ ಇತಿಹಾಸದ ಅರಿವು, ತಾಂತ್ರಿಕ ತರಬೇತಿ ಮತ್ತು ಕಲಾ ವ್ಯಾಕರಣದ ತಿಳುವಳಿಕೆ ಅಗತ್ಯ ಎಂದು ಅವರು ಒತ್ತಿಹೇಳಿದರು. ಹೀಗಾಗಿ ಕಾರಂತರ ಆಧುನಿಕ ಕಲಾ ಚಿಂತನೆಯ ಮೂಲದಲ್ಲಿ `ನವೀನತೆ'ಗಿಂತ `ಅರ್ಥಪೂರ್ಣ ಪ್ರಯೋಗ'ಕ್ಕೆ ಹೆಚ್ಚಿನ ಮಹತ್ವವಿದೆ.

ಕಾರಂತರ ಕಲಾ ಚಿಂತನೆಯಲ್ಲಿನ ಪ್ರಮುಖ ಸಾಮಾಜಿಕ ಆಯಾಮವೆಂದರೆ ಕಲಾಶಿಕ್ಷಣ. ಚಿತ್ರಕಲೆಯನ್ನು ಅರ್ಥಮಾಡಿಕೊಳ್ಳಲು ಶಾಲಾ ಹಂತದಿಂದಲೇ ಮಕ್ಕಳಿಗೆ ಕಲಾ ಶಿಕ್ಷಣ ದೊರೆಯಬೇಕು. ಕಲೆ ಜೀವನದಿಂದ ಪ್ರತ್ಯೇಕವಾದ ವಿಷಯವಲ್ಲ. ಅದು ವ್ಯಕ್ತಿಯ ಸೌಂದರ್ಯಪ್ರಜ್ಞೆ, ಕಲ್ಪನಾಶಕ್ತಿ ಮತ್ತು ಸಂವೇದನೆಯನ್ನು ಬೆಳೆಸುವ ಸಾಧನ. ಕಾರಂತರ 'ಬಾಲ ಪ್ರಪಂಚ' ಮೊದಲಾದ ಕೃತಿಗಳಲ್ಲಿಯೂ ಈ ಶಿಕ್ಷಣಮುಖಿ ದೃಷ್ಟಿ ಗೋಚರಿಸುತ್ತದೆ. ಅವರು ಕಲೆ ಕಲಾವಿದರಿಗಷ್ಟೇ ಸೇರಿದ ಕ್ಷೇತ್ರವಲ್ಲ ಎಂದು ನಂಬಿದ್ದರು. ಸಾಮಾನ್ಯ ಜನರಲ್ಲಿಯೂ ಕಲೆಯನ್ನು ನೋಡುವ ಸಾಮರ್ಥ್ಯ ಬೆಳೆಸಬೇಕು. ಈ ಅರ್ಥದಲ್ಲಿ ಅವರ ಕಲಾ ಚಿಂತನೆ ಜನಸಾಮಾನ್ಯರನ್ನು ಉದ್ದೇಶಿಸಿದ ಸಾಂಸ್ಕೃತಿಕ ಶಿಕ್ಷಣದ ರೂಪವನ್ನು ಪಡೆಯುತ್ತದೆ.

ಕಾರಂತರು ಕಲಾ ಅಕಾಡೆಮಿಗಳು ಮತ್ತು ಸಂಸ್ಥೆಗಳ ಕಾರ್ಯವೈಖರಿಯ ಕುರಿತು ಹಲವಾರು ಸಂದರ್ಭಗಳಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ಕಲಾ ಸಂಸ್ಥೆಗಳ ಪ್ರಧಾನ ಗುರಿ ಕಲಾವಿದರಿಗೆ ಆರ್ಥಿಕ ನೆರವು

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ನೀಡುವುದಷ್ಟೇ ಅಲ್ಲ. ಕಲೆಯ ಕುರಿತು ಸಮಾಜದಲ್ಲಿ ಅರಿವು ಮತ್ತು ಕಲಾಸಂಸ್ಕಾರವನ್ನು ಬೆಳೆಸುವುದು ಅವುಗಳ ಪ್ರಮುಖ ಕರ್ತವ್ಯ. ಜನರಲ್ಲಿ ಕಲೆಯ ಕುರಿತು ಜ್ಞಾನ ಬೆಳೆಸುವುದು, ಕಲಾ ಪ್ರದರ್ಶನಗಳನ್ನು ಆಯೋಜಿಸುವುದು, ಕಲಾ ಗ್ರಂಥಗಳನ್ನು ಪ್ರಕಟಿಸುವುದು, ಕಲಾಕೃತಿಗಳನ್ನು ದಾಖಲಿಸುವುದು ಮತ್ತು ಯುವ ಕಲಾವಿದರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಸಂಸ್ಥೆಗಳ ಜವಾಬ್ದಾರಿ ಎಂದು ಅವರ ಚಿಂತನೆಯಿಂದ ಗ್ರಹಿಸಬಹುದು. ಈ ದೃಷ್ಟಿಯಿಂದ ನೋಡಿದಾಗ ಕಾರಂತರ ಕಲಾ ಸಂಸ್ಥೆಗಳ ಕುರಿತ ವಿಮರ್ಶೆ ಆಡಳಿತಾತ್ಮಕ ಟೀಕೆಯಷ್ಟೇ ಅಲ್ಲ. ಅದು ಕಲೆ ಮತ್ತು ಸಮಾಜದ ಸಂಬಂಧದ ಕುರಿತು ಅವರ ವಿಶಾಲವಾದ ಸಾಂಸ್ಕೃತಿಕ ದೃಷ್ಟಿಕೋನವಾಗಿದೆ.

ಯಾವುದೇ ಚಿಂತಕನಂತೆ ಕಾರಂತರ ಕಲಾ ಚಿಂತನೆಯಲ್ಲಿಯೂ ಕೆಲವು ಮಿತಿಗಳಿವೆ. ಮೊದಲನೆಯದಾಗಿ, ಪಾಶ್ಚಿಮಾತ್ಯ ಕಲೆಯ ಪ್ರಯೋಗಶೀಲತೆಯನ್ನು ಅವರು ಕೆಲವೊಮ್ಮೆ ಹೆಚ್ಚು ಆದರ್ಶೀಕರಿಸುವಂತೆ ಕಾಣುತ್ತದೆ. ಭಾರತೀಯ ಕಲೆಯ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಕೆಲವೊಮ್ಮೆ ಪಾಶ್ಚಿಮಾತ್ಯ ಕಲೆಯ ದೃಶ್ಯವಿನ್ಯಾಸದ ಮಾನದಂಡಗಳಿಂದ ಅಳೆಯುವ ಪ್ರವೃತ್ತಿ ಗೋಚರಿಸುತ್ತದೆ. ಎರಡನೆಯದಾಗಿ, ಚಿತ್ರಕಲೆಯ ರೂಪಾತ್ಮಕ ಅಂಶಗಳಿಗೆ ನೀಡುವ ಹೆಚ್ಚಿನ ಒತ್ತು ಕೆಲವೊಮ್ಮೆ ಕಲಾಕೃತಿಯ ಸಾಂಸ್ಕೃತಿಕ ಅರ್ಥವನ್ನು ಹಿಂದೆ ಸರಿಸುತ್ತದೆ. ಮೂರನೆಯದಾಗಿ, ಕರ್ನಾಟಕದ ಚಿತ್ರಕಲೆಯ ಕುರಿತ ಕೆಲವು ಬರಹಗಳಲ್ಲಿ ಈಗಾಗಲೇ ಲಭ್ಯವಿದ್ದ ಸಂಶೋಧನಾ ದಾಖಲೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಅವರ ಅಧ್ಯಯನಕ್ಕೆ ಮಿತಿಯನ್ನು ಉಂಟುಮಾಡುತ್ತದೆ. ಆದರೂ ಈ ಮಿತಿಗಳನ್ನು ಅವರ ಕಾಲಘಟ್ಟದ ಕಲಾ ಅಧ್ಯಯನದ ಪರಿಸರದೊಂದಿಗೆ ಸಂಬಂಧಿಸಿ ನೋಡಬೇಕು. ಕನ್ನಡದಲ್ಲಿ ಕಲೆಯ ಕುರಿತು ವ್ಯವಸ್ಥಿತ ಜ್ಞಾನವನ್ನು ರೂಪಿಸುವ ಪ್ರಯತ್ನವೇ ಇನ್ನೂ ಪ್ರಾರಂಭಿಕ ಹಂತದಲ್ಲಿದ್ದ ಸಂದರ್ಭದಲ್ಲಿ ಕಾರಂತರು ಕೈಗೊಂಡ ಕಾರ್ಯದ ಮಹತ್ವವನ್ನು ಈ ಮಿತಿಗಳು ಕಡಿಮೆ ಮಾಡುವುದಿಲ್ಲ.

ಕಾರಂತರ ಚಿತ್ರಕಲಾ ಚಿಂತನೆಯ ಮಹತ್ವವನ್ನು ಕೇವಲ ಅವರ ಬರೆದ ಕಲಾ ಲೇಖನಗಳ ಸಂಖ್ಯೆಯಿಂದ ಅಳೆಯಲು ಸಾಧ್ಯವಿಲ್ಲ. ಅವರು ಕನ್ನಡದಲ್ಲಿ 'ಕಲೆಯನ್ನು ನೋಡುವ ವಿಧಾನ'ವೊಂದನ್ನು ರೂಪಿಸಲು ಪ್ರಯತ್ನಿಸಿದರು ಎಂಬುದೇ ಅವರ ದೊಡ್ಡ ಕೊಡುಗೆ. ಕಲಾಕೃತಿಯನ್ನು ನೋಡಿದಾಗ ಅದರ ಕಥೆಯನ್ನು ಮಾತ್ರ ಕೇಳಬಾರದು. ಅದರ ರೇಖೆ, ಬಣ್ಣ, ಆಕಾರ, ಲಯ, ಸಂಯೋಜನೆ ಮತ್ತು ಕಲಾವಿದನ ವೈಯಕ್ತಿಕ ದೃಷ್ಟಿಯನ್ನು ಗಮನಿಸಬೇಕು ಎಂಬುದು ಅವರ ಮೂಲಭೂತ ನಿಲುವು. ಇದರಿಂದ ಕನ್ನಡದ ಓದುಗನಿಗೆ ಕಲೆಯನ್ನು ಸಾಹಿತ್ಯದಂತೆ ಓದುವ ಹೊಸ ಅವಕಾಶ ದೊರೆಯಿತು. ಸಾಹಿತ್ಯ ಓದುಗನು ಪದ ಮತ್ತು ಅರ್ಥಗಳ ಮೂಲಕ ಕೃತಿಯನ್ನು ಗ್ರಹಿಸುತ್ತಾನೆ. ಆದರೆ ಚಿತ್ರವನ್ನು ಗ್ರಹಿಸುವಾಗ ದೃಶ್ಯಭಾಷೆಯನ್ನು ಓದಬೇಕಾಗುತ್ತದೆ. ಈ ದೃಶ್ಯಭಾಷೆಯ ಅರಿವನ್ನು ಕನ್ನಡ ಓದುಗರಿಗೆ ನೀಡುವ ಪ್ರಯತ್ನ ಕಾರಂತರ ಬರಹಗಳಲ್ಲಿ ಕಂಡುಬರುತ್ತದೆ. ಇದೇ ಕಾರಣದಿಂದ ಕಾರಂತರ ಕಲಾ ಚಿಂತನೆ 'ದೃಶ್ಯಸಾಕ್ಷರತೆ'ಯ ಪ್ರಾರಂಭಿಕ ರೂಪವೆಂದು ಪರಿಗಣಿಸಬಹುದು. ಇಂದಿನ ದೃಶ್ಯಮಾಧ್ಯಮಗಳ ಪ್ರಾಬಲ್ಯದ ಸಂದರ್ಭದಲ್ಲಿ ಈ ಚಿಂತನೆ ಮತ್ತಷ್ಟು ಪ್ರಸ್ತುತವಾಗುತ್ತದೆ.

ಇಂದಿನ ಕಾಲದಲ್ಲಿ ಚಿತ್ರಕಲೆ, ಚಲನಚಿತ್ರ, ಛಾಯಾಗ್ರಹಣ, ಜಾಹೀರಾತು, ಡಿಜಿಟಲ್ ಕಲೆ, ಸಾಮಾಜಿಕ ಮಾಧ್ಯಮಗಳ ದೃಶ್ಯ ಸಂಸ್ಕೃತಿ ಮೊದಲಾದವು ನಮ್ಮ ದೈನಂದಿನ ಬದುಕಿನ ಭಾಗವಾಗಿವೆ. ಆದರೆ ದೃಶ್ಯಗಳ ಸಂಖ್ಯೆ ಹೆಚ್ಚಾದಷ್ಟೇ ದೃಶ್ಯಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ ಎಂದು ಹೇಳಲಾಗುವುದಿಲ್ಲ. ಒಂದು ಚಿತ್ರವನ್ನು ನೋಡುವುದು ಮತ್ತು ಅದರ ಅರ್ಥವನ್ನು ಗ್ರಹಿಸುವುದು ಎರಡು ವಿಭಿನ್ನ ಪ್ರಕ್ರಿಯೆಗಳು. ಈ ಸಂದರ್ಭದಲ್ಲಿ ಕಾರಂತರ 'ಕಲೆಯನ್ನು ನೋಡುವ ಕಣ್ಣು' ಎಂಬ ಚಿಂತನೆ ಮಹತ್ವ ಪಡೆಯುತ್ತದೆ. ಕಲಾಕೃತಿಯನ್ನು ವಿಮರ್ಶಾತ್ಮಕವಾಗಿ ನೋಡುವುದು, ಅದರ ಹಿಂದೆ ಇರುವ ಸಾಂಸ್ಕೃತಿಕ ಮತ್ತು ರಾಜಕೀಯ ಅರ್ಥಗಳನ್ನು ಗುರುತಿಸುವುದು, ಅದರ ರೂಪ ಮತ್ತು ತಂತ್ರವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸೌಂದರ್ಯವನ್ನು ಅನುಭವಿಸುವುದು ಇಂದಿನ ದೃಶ್ಯ ಸಂಸ್ಕೃತಿಯಲ್ಲಿಯೂ ಅಗತ್ಯ. ಹೀಗಾಗಿ ಕಾರಂತರ ಕಲಾ ಚಿಂತನೆ ಇತಿಹಾಸದ ಒಂದು ಭಾಗ ಮಾತ್ರವಲ್ಲ. ಅದು ಇಂದಿನ ಕಲಾ ಶಿಕ್ಷಣ ಮತ್ತು ದೃಶ್ಯ ಸಂಸ್ಕೃತಿಯ ಚರ್ಚೆಗೂ ಪ್ರಸ್ತುತವಾಗಿದೆ.

ಈ ಅಧ್ಯಯನದಿಂದ ಕೆಳಗಿನ ನಿರ್ಣಯಗಳನ್ನು ದಾಖಲಿಸಬಹುದು:

1. ಕಾರಂತರ ಚಿತ್ರಕಲಾ ಚಿಂತನೆ ಅವರ ಬಹುಮುಖ ವ್ಯಕ್ತಿತ್ವದ ಅವಿಭಾಜ್ಯ ಭಾಗವಾಗಿದೆ.
2. ಅವರ ಕಲಾದೃಷ್ಟಿಯ ಬೆಳವಣಿಗೆಯಲ್ಲಿ ನೇರ ಕಲಾನುಭವ ಮತ್ತು ಪ್ರವಾಸಗಳಿಗೆ ಪ್ರಮುಖ ಸ್ಥಾನವಿದೆ.
3. ಅವರು ಭಾರತೀಯ ಕಲೆಯನ್ನು ಗೌರವಿಸಿದರೂ ಅದರ ಸಾಮಾಜಿಕ ಮಿತಿಗಳನ್ನು ವಿಮರ್ಶಿಸಿದರು.
4. ಪಾಶ್ಚಿಮಾತ್ಯ ಕಲೆಯ ಪ್ರಯೋಗಶೀಲತೆಯಿಂದ ಅವರು ಪ್ರಭಾವಿತರಾದರೂ ಅಂಧಾನುಕರಣವನ್ನು ವಿರೋಧಿಸಿದರು.
5. ಕಲಾವಿದನ ಆಂತರಿಕ ಅನುಭವ ಮತ್ತು ಸೃಜನಶೀಲ ಮನಸ್ಸಿಗೆ ಅವರು ಮಹತ್ವ ನೀಡಿದರು.
6. ಕಲಾಕೃತಿಯ ವಿಷಯದ ಜೊತೆಗೆ ರೇಖೆ, ಬಣ್ಣ, ಆಕಾರ ಮತ್ತು ಸಂಯೋಜನೆಗಳೂ ಮುಖ್ಯವೆಂದರು.
7. ಕಲೆಯನ್ನು ಅರ್ಥಮಾಡಿಕೊಳ್ಳಲು ನೋಡುಗನಿಗೂ ಕಲಾಸಂಸ್ಕಾರ ಅಗತ್ಯ ಎಂದು ಪ್ರತಿಪಾದಿಸಿದರು.
8. ಅವರ ಕತೆ ಮತ್ತು ಕಾದಂಬರಿಗಳಲ್ಲಿಯೂ ಚಿತ್ರಕಲೆ ಮತ್ತು ಕಲಾವಿದರಿಗೆ ಸೃಜನಾತ್ಮಕ ಸ್ಥಾನ ದೊರೆತಿದೆ.
9. ಕರ್ನಾಟಕದ ಚಿತ್ರಕಲೆಯ ದಾಖಲಾತಿಗೆ ಕಾರಂತರ ಕೊಡುಗೆ ಗಮನಾರ್ಹವಾಗಿದೆ.
10. ಕಲಾಶಿಕ್ಷಣ ಮತ್ತು ಜನರಲ್ಲಿ ಕಲಾಸಂಸ್ಕಾರ ಬೆಳೆಸುವುದನ್ನು ಅವರು ನಿರಂತರವಾಗಿ ಒತ್ತಿಹೇಳಿದರು.
11. ಆಧುನಿಕ ಕಲೆಯನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸದೆ ಅದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದರು.

**ಉಪಸಂಹಾರ (Conclusion):**

ಶಿವರಾಮ ಕಾರಂತರ ಚಿತ್ರಕಲಾ ಚಿಂತನೆ ಕನ್ನಡದ ಆಧುನಿಕ ಸಾಂಸ್ಕೃತಿಕ ಚಿಂತನೆಯ ಒಂದು ಮಹತ್ವದ ಅಧ್ಯಾಯವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ ಕಾರಂತರು ಚಿತ್ರಕಲೆಯನ್ನು ಒಂದು ಪೂರಕ ವಿಷಯವಾಗಿ ಮಾತ್ರ ನೋಡದೆ ಸ್ವತಂತ್ರವಾದ ಜ್ಞಾನ ಮತ್ತು ಸೌಂದರ್ಯಾನುಭವದ ಕ್ಷೇತ್ರವಾಗಿ ಪರಿಗಣಿಸಿದರು. ಅವರ ಕಲಾ ಚಿಂತನೆಯ ಮೂಲದಲ್ಲಿ ಮೂರು ಪ್ರಮುಖ ಆಶಯಗಳನ್ನು ಗುರುತಿಸಬಹುದು. ಮೊದಲನೆಯದು ಕಲೆಯನ್ನು ತಿಳಿಯಬೇಕು ಎಂಬುದು. ಎರಡನೆಯದು ಕಲೆಯನ್ನು ನೋಡುವ ಮತ್ತು ಆಸ್ವಾದಿಸುವ ಸಂಸ್ಕಾರವನ್ನು ಬೆಳೆಸಬೇಕು ಎಂಬುದು. ಮೂರನೆಯದು ಕಲೆ ಸಮಾಜದ ಬದುಕಿನ ಒಂದು ಅವಿಭಾಜ್ಯ ಅಂಗವಾಗಬೇಕು ಎಂಬುದು.

ಕಾರಂತರಿಗೆ ಕಲಾಕೃತಿ ಎಂದರೆ ಕೇವಲ ಒಂದು ಚಿತ್ರವಲ್ಲ. ಅದು ಕಲಾವಿದನ ಅನುಭವ, ಸಂವೇದನೆ, ಕಲ್ಪನೆ ಮತ್ತು ತಾಂತ್ರಿಕ ಸಾಮರ್ಥ್ಯಗಳ ಸಮನ್ವಯ. ಅದನ್ನು ಗ್ರಹಿಸುವ ನೋಡುಗನಿಗೂ ಸೂಕ್ಷ್ಮ ದೃಷ್ಟಿ ಮತ್ತು ಕಲಾಸಂಸ್ಕಾರ ಅಗತ್ಯ. ಈ ಕಾರಣದಿಂದ ಅವರ ಕಲಾ ಬರಹಗಳು ಒಂದೇ ಸಮಯದಲ್ಲಿ ಕಲಾ ವಿಮರ್ಶೆ, ಕಲಾ ಶಿಕ್ಷಣ ಮತ್ತು ಸಾಂಸ್ಕೃತಿಕ ವಿಮರ್ಶೆಯ ರೂಪವನ್ನು ಪಡೆಯುತ್ತವೆ.

ಭಾರತೀಯ ಕಲಾಪರಂಪರೆಯ ಕುರಿತು ಅವರಿಗೆ ಅಪಾರ ಗೌರವವಿದ್ದರೂ ಅದರ ಸಾಮಾಜಿಕ ನಿರ್ಲಕ್ಷ್ಯದ ಕುರಿತು ಅವರು ಅಸಮಾಧಾನ ವ್ಯಕ್ತಪಡಿಸಿದರು. ಪಾಶ್ಚಿಮಾತ್ಯ ಕಲೆಯ ಪ್ರಯೋಗಶೀಲತೆಯನ್ನು ಮೆಚ್ಚಿದರೂ ಅದರ ಬಾಹ್ಯ ಅನುಕರಣವನ್ನು ಒಪ್ಪಲಿಲ್ಲ. ಆಧುನಿಕ ಕಲೆಯನ್ನು ಕುರಿತು ತಮಗೆ ತಿಳಿಯದಿರುವುದನ್ನು ಒಪ್ಪಿಕೊಂಡ ಅವರ ಬೌದ್ಧಿಕ ಪ್ರಾಮಾಣಿಕತೆ ಗಮನಾರ್ಹವಾಗಿದೆ.

ಅವರ ಚಿತ್ರಕಲಾ ಚಿಂತನೆಯ ಮತ್ತೊಂದು ವಿಶೇಷವೆಂದರೆ ಅದು ಅವರ ಸಾಹಿತ್ಯದಿಂದ ಪ್ರತ್ಯೇಕವಾಗಿಲ್ಲ. ಕತೆ, ಕಾದಂಬರಿ, ಪ್ರವಾಸ ಸಾಹಿತ್ಯ ಮತ್ತು ಪ್ರಬಂಧಗಳಲ್ಲಿ ಚಿತ್ರಕಲೆ, ಶಿಲ್ಪ ಮತ್ತು ಕಲಾವಿದರ ಉಪಸ್ಥಿತಿ ಅವರ ಒಟ್ಟು ಸೃಜನಶೀಲ ವ್ಯಕ್ತಿತ್ವದ ಭಾಗವಾಗಿದೆ. ಕನ್ನಡದಲ್ಲಿ ಕಲೆಯ ಕುರಿತು ಓದುಗರಲ್ಲಿ ಆಸಕ್ತಿ ಮೂಡಿಸುವುದು, ಕಲಾಕೃತಿಗಳನ್ನು ಪರಿಚಯಿಸುವುದು,


Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:5(1), May 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಭಾರತೀಯ ಮತ್ತು ಪಾಶ್ಚಿಮಾತ್ಯ ಕಲಾ ಪರಂಪರೆಗಳನ್ನು ತೌಲನಿಕವಾಗಿ ನೋಡುವುದು, ಕರ್ನಾಟಕದ ಕಲಾ ಸಂಪತ್ತನ್ನು ದಾಖಲಿಸುವುದು ಮತ್ತು ಕಲಾಸಂಸ್ಕಾರವನ್ನು ಬೆಳೆಸುವುದು—ಈ ಎಲ್ಲ ಕ್ಷೇತ್ರಗಳಲ್ಲಿ ಕಾರಂತರ ಪ್ರಯತ್ನ ಮಹತ್ವದ್ದಾಗಿದೆ. ಆದ್ದರಿಂದ ಶಿವರಾಮ ಕಾರಂತರನ್ನು ಕೇವಲ ಕಾದಂಬರಿಕಾರ ಅಥವಾ ಸಾಹಿತ್ಯಸೃಷ್ಟಿಕರ್ತರಾಗಿ ಮಾತ್ರ ನೋಡುವುದು ಅವರ ವ್ಯಕ್ತಿತ್ವದ ವ್ಯಾಪ್ತಿಯನ್ನು ಕುಗ್ಗಿಸುವಂತಾಗುತ್ತದೆ. ಅವರು ಕನ್ನಡದ ಕಲಾ ಚಿಂತಕ, ಕಲಾ ವಿಮರ್ಶಕ, ಕಲಾ ಶಿಕ್ಷಣದ ಪ್ರಚಾರಕ ಮತ್ತು ದೃಶ್ಯಸಂಸ್ಕೃತಿಯ ಜಾಗೃತಿಪರ ಚಿಂತಕರೂ ಆಗಿದ್ದಾರೆ.

ಇಂದಿನ ದೃಶ್ಯಮಾಧ್ಯಮ ಪ್ರಧಾನ ಸಮಾಜದಲ್ಲಿ ಕಾರಂತರ ಚಿಂತನೆಗೆ ಹೊಸ ಅರ್ಥ ದೊರೆಯುತ್ತದೆ. ಚಿತ್ರವನ್ನು ನೋಡುವುದಷ್ಟೇ ಅಲ್ಲದೆ ಅದರ ಅರ್ಥವನ್ನು ಗ್ರಹಿಸುವುದು, ಅದರ ಸೌಂದರ್ಯವನ್ನು ಅನುಭವಿಸುವುದು ಮತ್ತು ಅದರ ಹಿಂದೆ ಇರುವ ಸಾಂಸ್ಕೃತಿಕ ಅರ್ಥವ್ಯವಸ್ಥೆಯನ್ನು ಗುರುತಿಸುವುದು ಅಗತ್ಯವಾಗಿದೆ. ಈ ದೃಷ್ಟಿಯಿಂದ ಕಾರಂತರ ಕಲಾ ಚಿಂತನೆ ಸಮಕಾಲೀನ ಕನ್ನಡ ಸಮಾಜಕ್ಕೂ ಪ್ರಸ್ತುತವಾದ ಸಾಂಸ್ಕೃತಿಕ ಮಾರ್ಗದರ್ಶನವನ್ನು ನೀಡುತ್ತದೆ.

## ಪರಾಮರ್ಶನ ಗ್ರಂಥಗಳು (References):

1. ಶಿವರಾಮ ಕಾರಂತ ಕೆ, ಕರ್ನಾಟಕದಲ್ಲಿ ಚಿತ್ರಕಲೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1971
2. ಶಿವರಾಮ ಕಾರಂತ ಕೆ, ಭಾರತೀಯ ಚಿತ್ರಕಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1995.
3. ಶಿವರಾಮ ಕಾರಂತ ಕೆ, ಕಲೆಯ ದರ್ಶನ, ಹರ್ಷ ಪ್ರಕಾಶನಾಲಯ, ಮೈಸೂರು, 1950
4. ಶಿವರಾಮ ಕಾರಂತ ಕೆ, ಅಪೂರ್ವ ಪಶ್ಚಿಮ, ಸಪ್ನ ಬುಕ್ ಹೌಸ್, ಬೆಂಗಳೂರು, 2018.
5. ಶಿವರಾಮ ಕಾರಂತ ಕೆ, ಸ್ಮೃತಿಪಟಲದಿಂದ, ರಾಜಲಕ್ಷ್ಮಿ ಪ್ರಕಾಶನ, ಬಳೆಪೇಟೆ, ಬೆಂಗಳೂರು, 1978
6. ಶಿವರಾಮ ಕಾರಂತ ಕೆ, ಕಲಾ ಪ್ರಪಂಚ, ವ್ಯಾಸಂಗ ವಿಸ್ತರಣ–ಪ್ರಕಟಣ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978
7. ಶಿವರಾಮ ಕಾರಂತ ಕೆ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 2017
8. ಟಿ.ಪಿ. ಅಶೋಕ, (ಸಂ), ಕಾರಂತ ಮಂಥನ, ಕರ್ನಾಟಕ ಸಂಘ, ಪುತ್ತೂರು, 1994
9. ಸುಂದರ ಅ., ಕನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1994
10. ಕಾಳೆ ವ್ಹಿ.ಟಿ., ಚಿತ್ರಕಲಾ ದರ್ಪಣ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1994
11. ನರಸಿಂಹನ್ ಅ.ಲ., ಮರಿಶಾಮಾಚಾರ್ ಎನ್., (ಸಂ), ಚಿತ್ರಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1993
12. ನರಸಿಂಹನ್ ಅ.ಲ., ಮರಿಶಾಮಾಚಾರ್ ಎನ್., (ಸಂ), ಕಲಾಕೋಶ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1994